# ವಯಸ್ಸಾಗುತ್ತಿರುವ ಕಣ್ಣುಗಳು

## ವಯಸ್ಸಿಗೆ ಸಂಬಂಧಿಸಿದ ಮ್ಯಾಕ್ಯುಲರ್ ಡಿಜೆನರೇಶನ್ ನ (ಎಎಂಡಿ) ರೋಗಲಕ್ಷಣಗಳು, ತಡೆಗಟ್ಟುವಿಕೆ ಮತ್ತು ಚಿಕಿತ್ಸೆ



## ವಯಸ್ಸಿಗೆ ಸಂಬಂಧಿಸಿದ ಮ್ಯಾಕ್ಯುಲರ್ ಡಿಜೆನರೇಶನ್ ನ (ಎಎಂಡಿ) ಎಂದರೇನು?

ದೇಹದ ನೈಸರ್ಗಿಕ ವಯಸ್ಸಾಗುವಿಕೆಯ ಪ್ರಕ್ರಿಯೆಯ ಭಾಗವಾಗಿ ಅನೇಕ ವಯಸ್ಸಾದ ಜನರು ಮ್ಯಾಕ್ಯುಲರ್ ಡಿಜೆನರೇಶನ್ ಅನ್ನು ಹೊಂದಿರುತ್ತಾರೆ. ವಿವಿಧ ರೀತಿಯ ಮ್ಯಾಕ್ಯುಲರ್ ಸಮಸ್ಯೆಗಳಿವೆ, ಆದರೆ ಎಎಮ್‌ಡಿ ಅತ್ಯಂತ ಸಾಮಾನ್ಯವಾಗಿದೆ.





ಮ್ಯಾಕ್ಯುಲರ್ ಡಿಜೆನರೇಶನ್ ಈ ಕೆಳಗಿನಂತಹ ಹಲವಾರು ಅಂಶಗಳಿಂದ ಉಂಟಾಗಬಹುದು:

- ರೆಟಿನಾದ ಅಡಿಯಲ್ಲಿ ಡ್ರೂಸೆನ್ ಎಂಬ ಅಂಶಗಳ ರಚನೆ.
- ಕೆಲವು ಸಂದರ್ಭಗಳಲ್ಲಿ ರೆಟಿನಾದ ಅಡಿಯಲ್ಲಿ ಅಸಹಜ ರಕ್ತನಾಳಗಳ ಬೆಳವಣಿಗೆ ಇರುತ್ತದೆ.

## ಎಎಂಡಿ ಯ ಕಾರಣಗಳು ಯಾವುವು?


ವಯಸ್ಸು> 60 ವರ್ಷಗಳು


ಧೂಮಪಾನ


ಉಜಟಿಜಣಬಧಿ


ಅಧಿಕ ರಕ್ತದೊತ್ತಡ


ಹೃದಯ ರೋಗ


ಬೊಜ್ಜು


ಅಧಿಕ ಕೊಲೆಸ್ಟ್ರಾಲ್


ಆಂಟಿಆಕ್ಸಿಡೆಂಟ್ ಗಳ ಕಡಿಮೆ ಸೇವನೆ

## ಎಎಂಡಿ ವಿಧಗಳು ಯಾವುವು?

### ಡ್ರೈ ಎಎಂಡಿ



ಈ ಸ್ಥಿತಿಯು ಮಕ್ಯುಲಾದ ಅಂಗಾಂಶಗಳ ವಯಸ್ಸಾಗುವಿಕೆ ಮತ್ತು ತೆಳುವಾಗುವಿಕೆಯಿಂದ ಉಂಟಾಗುತ್ತದೆ.

### ವೆಟ್ ಎಎಂಡಿ



ಅಸಹಜ ರಕ್ತನಾಳಗಳು ರೆಟಿನಾದ ಕೆಳಗೆ ಬೆಳೆಯಲು ಪ್ರಾರಂಭಾವದಾಗ ವೆಟ್ ಮ್ಯಾಕ್ಯುಲರ್ ಡಿಜೆನರೇಶನ್ ಸಂಭವಿಸುತ್ತದೆ.

ಈ ರೀತಿಯ ಮ್ಯಾಕ್ಯುಲರ್ ಡಿಜೆನರೇಶನ್‌ನಿಂದ ಉಂಟಾಗುವ ದೃಷ್ಟಿ ನಷ್ಟವು, ಡ್ರೈ ಮ್ಯಾಕ್ಯುಲರ್ ಡಿಜೆನರೇಶನ್‌ಗಿಂತ ವೇಗವಾಗಿದೆ ಮತ್ತು ಹೆಚ್ಚು ಗಮನಾರ್ಹವಾಗಿದೆ. ವೆಟ್ ಮ್ಯಾಕ್ಯುಲರ್ ಡಿಜೆನರೇಶನ್ ರೋಗಲಕ್ಷಣಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ ಮತ್ತು ಬಹು ವೇಗವಾಗಿ ಹದಗೆಡುತ್ತವೆ.

## ಲಕ್ಷಣಗಳು ಮತ್ತು ಚಿಹ್ನೆಗಳು


ಮಂದ ದೃಷ್ಟಿ


ಮಸುಕಾದ ಬಣ್ಣ


ಅಲೆಅಲೆಯಾದ ದೃಷ್ಟಿ


ಕೇಂದ್ರ ದೃಷ್ಟಿಯ ನಷ್ಟ

## ಎಎಂಡಿ ಯನ್ನು ಹೇಗೆ ರೋಗಪತ್ತೆ ಮಾಡಲಾಗುತ್ತದೆ?

### ಆಂಸ್ಲರ್ ಗ್ರಿಡ್



ನೀವು "ಮ್ಯಾಕ್ಯುಲರ್ ಡಿಜೆನರೇಶನ್" ಹೊಂದಿದ್ದರೆ, ಆಂಸ್ಲರ್ ಗ್ರಿಡ್‌ನಲ್ಲಿ ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಬಹುದು. ಆದರೆ ಇದು "ಒಟ್ಟಾರೆ" ಪರೀಕ್ಷೆಯಾಗಿದೆ ಮತ್ತು ಆರಂಭಿಕ ದೃಷ್ಟಿ ನಷ್ಟವನ್ನು ಕಂಡುಹಿಡಿಯದೇ ಇರಬಹುದು ಎಂಬುದನ್ನು ನೆನಪಿಡಿ.

### ಆಪ್ಟಿಕಲ್ ಕೊಹೆರೆನ್ಸ್ ಟೊಮೊಗ್ರಫಿ (ಓಸಿಟಿ)



ಇದು ಹೈ ರೆಸಲ್ಯೂಶನ್ ಚಿತ್ರಗಳೊಂದಿಗೆ ರೆಟಿನಾದ ಸ್ಪಷ್ಟ ಚಿತ್ರವನ್ನು ನೀಡುವ ರೋಗನಿರ್ಣಯದ ತಂತ್ರವಾಗಿದೆ.

### ಫಂಡಸ್ ಫ್ಲೋರೊಸೆಸಿನ್ ಆಂಜಿಯೋಗ್ರಫಿ (ಎಫ್‌ಎಫ್‌ಎ)



ಇದು ಕಣ್ಣಿನ ಹಿಂಭಾಗದ ಸ್ಥಿತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಲು ನಡೆಸಲಾಗುವ ಸಾಮಾನ್ಯ ವಿಧಾನವಾಗಿದೆ. ಒಂದು ಬಣ್ಣವನ್ನು ನಿಮ್ಮ ತೋಳಿನೊಳಗೆ ನೀಡಲಾಗುತ್ತದೆ, ಮತ್ತು ಯಾವುದೇ ಅಡೆತಡೆಗಳಿಗಾಗಿ ಛಾಯಾಚಿತ್ರವನ್ನು ತೆಗೆದುಕೊಳ್ಳುವಂತೆ ಅದು ನಿಮ್ಮ ರೆಟಿನಾದ ನ್ಸರಗಳೊಳಗೆ ಚಲಿಸುತ್ತದೆ.

## ಎಎಂಡಿ ಗೆ ಹೇಗೆ ಚಿಕಿತ್ಸೆ ನೀಡಲಾಗುತ್ತದೆ?

### ಡ್ರೈ ಎಎಂಡಿ

ಮ್ಯಾಕ್ಯುಲರ್ ಡಿಜೆನರೇಶನ್‌ನ ಡ್ರೈ ರೂಪಕ್ಕೆ ಯಾವುದೇ ಸಾಬೀತಾದ ಚಿಕಿತ್ಸೆ ಇಲ್ಲ. ಆದರೂ, ಒಂದು ದೊಡ್ಡ ವೈಜ್ಞಾನಿಕ ಅಧ್ಯಯನವು ಆಂಟಿಆಕ್ಸಿಡೆಂಟ್, ವಿಟಮಿನ್‌ಗಳು ಮತ್ತು ಸತುವು, ಅದರ ಪ್ರಗತಿಯನ್ನು ಹೆಚ್ಚು ಮುಂದುವರಿದ ಹಂತಗಳಿಗೆ ಹೋಗದಂತೆ ನಿಧಾನಗೊಳಿಸುವ ಮೂಲಕ, ಕೆಲವು ಜನರಲ್ಲಿ ಮ್ಯಾಕ್ಯುಲರ್ ಡಿಜೆನರೇಶನ್‌ನ ದುಷ್ಪರಿಣಾಮವನ್ನು ಕಡಿಮೆ ಮಾಡುತ್ತದೆ ಎಂದು ತೋರಿಸಿದೆ.

### ವೆಟ್ ಎಎಂಡಿ

#### ಆಂಟಿ–ವಿಇಜಿಎಫ್ ಚಿಕಿತ್ಸೆ

ಆ್ಯಂಟಿ–ವಾಸ್ಕುಲರ್ ಎಂಡೋಥೀಲಿಯಲ್ ಗ್ರೋತ್ ಫ್ಯಾಕ್ಟರ್ (ಆ್ಯಂಟಿ–ವಿಇಜಿಎಫ್) ಚುಚ್ಚುಮದ್ದಿನೊಂದಿಗಿನ ಚಿಕಿತ್ಸೆಯು ಪ್ರಮುಖ ದೃಶ್ಯ ಗುಣಗಳನ್ನು (ಬಣ್ಣ, ಹೊಳಪು ಮತ್ತು ತೀಕ್ಷ್ಣತೆ) ಮತ್ತು ಓದುವುದು, ದೂರದರ್ಶನವನ್ನು ವೀಕ್ಷಿಸುವುದು, ಕಾರ್ ಡ್ರೈವಿಂಗ್ ಮುಂತಾದ ಜೀವನದ ಗುಣಮಟ್ಟದ ಮೇಲೆ ಪ್ರಭಾವ ಬೀರುವಂತಹ ಹಲವಾರು ಚಟುವಟಿಕೆಗಳನ್ನು ಸುಧಾರಿಸಬಹುದು.

#### ಫೋಟೊಡೈನಾಮಿಕ್ ಥೆರಪಿ (ಪಿಡಿಟಿ)

ಈ ಚಿಕಿತ್ಸೆಯು ಫೋಟೊಸೆನ್ಸಿಟೈಸರ್ ಎಂಬ ಬೆಳಕಿನಿಂದ–ಸಕ್ರಿಯಗೊಳ್ಳುವ ಔಷಧದ ಸಂಯೋಜನೆಯನ್ನು ಬಳಸುತ್ತದೆ ಮತ್ತು ಮಕ್ಯುಲಾದ ಮಧ್ಯಭಾಗದಲ್ಲಿರುವ ವೆಟ್ ಮ್ಯಾಕ್ಯುಲರ್ ಡಿಜೆನರೇಶನ್‌ಗೆ ಚಿಕಿತ್ಸೆ ನೀಡಲು, ಒಂದು ವಿಶೇಷವಾದ ಕಡಿಮೆ–ಶಕ್ತಿಯ ಅಥವಾ ತಂಪಾದ ಲೇಸರ್ ಅನ್ನು ಬಳಸುತ್ತದೆ.

## ಲೇಸರ್ ಚಿಕಿತ್ಸೆ

ಲೇಸರ್ ಫೋಟೊಕೊಗ್ಯುಲೇಷನ್, ವೆಟ್ ಎಎಂಡಿ ಗೆ ಇರುವ ಮತ್ತೊಂದು ಚಿಕಿತ್ಸೆಯಾಗಿದೆ. ಈ ಚಿಕಿತ್ಸೆಯು ಸೋರಿಕೆಯನ್ನು ತಡೆಗಟ್ಟುವಲ್ಲಿ ಹೊಸ ರಕ್ತನಾಳಗಳನ್ನು ಮುಚ್ಚಲು ಲೇಸರ್ ಬೆಳಕನ್ನು ಬಳಸುತ್ತದೆ.




## ರೂಢೀಗತ ಆರೈಕೆ

ಎಎಂಡಿ ಹದಗೆಡುವುದನ್ನು ತಡೆಯಲು ಅಥವಾ ನಿಧಾನಗೊಳಿಸಲು ಸಹಾಯ ಮಾಡುವ ಮಾರ್ಗಸೂಚಿಗಳು ಇಲ್ಲಿವೆ:



ಧೂಮಪಾನವನ್ನು ತಪ್ಪಿಸಿ



ನಿಮ್ಮ ರಕ್ತದಲ್ಲಿನ ಸಕ್ಕರೆ
ಮತ್ತು ಕೊಲೆಸ್ಟ್ರಾಲ್ ಮಟ್ಟವನ್ನು ನಿಭಾಯಿಸಿ



ದಿನವೂ ವ್ಯಾಯಾಮ ಮಾಡಿ



ವರ್ಷಕ್ಕೊಮ್ಮೆಯಾದರೂ
ಕಣ್ಣಿನ ತಪಾಸಣೆ ಮಾಡಿಸಿ



ಗಾಢ ಬಣ್ಣದ, ಹಸಿರು
ತರಕಾರಿಗಳನ್ನು ಸಾಕಷ್ಟು ಸೇವಿಸಿ

**Disclaimer:** This material is for information purpose only. It does not replace the advice or counsel of a doctor or healthcare professional. We make every effort to provide accurate and timely information but make no guarantees in this regard. You should consult comply with only on the advice of your ophthalmologist or healthcare professional.

RAZUMAB™
Ranibizumab 0.5 mg Injection

INTAS

Scan the QR Code to know more about Razumab

ENGLISH 2160460

**INTAS PHARMACEUTICALS LIMITED**
Near Sola Bridge, S.G. Highway, Thaltej,
Ahmedabad – 380054, Gujarat, INDIA.
Website : www.intaspharma.com